## ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ ರೊದ್ದ ರಸ್ತೆ, ಧಾರವಾಡ

ಸಂಖ್ಯೆ: ಸಿ10/ಸ.ಪ್ರೌ.ಆ/ವರ್ಗಾ/18/2016-17 ದಿನಾಂಕ: 15-09-2016

**ವರ್ಗಾವಣೆ ತುರ್ತು ಕ್ರಮ**

ಗೆ,

ವಿಭಾಗದ ಎಲ್ಲ ಉಪನಿರ್ದೇಶಕರು(ಆಡಳಿತ),

ಸಾರ್ವಜನಿಕ ಶಿಕ್ಷಣ ಇಲಾಖೆ.

**ವಿಷಯ**: 2016-17ನೇ ಸಾಲಿನ ಪ್ರೌಢ ಶಾಲಾ ಸಹ ಶಿಕ್ಷಕರ ಘಟಕದೊಳಗಿನ ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ಕೌನ್ಸಿಲಿಂಗ್ ದಿನಾಂಕಗಳನ್ನು ನಿಗದಿ ಪಡಿಸಿದ ಕುರಿತು ವೇಳಾಪಟ್ಟಿ.

**ಉಲ್ಲೇಖ**: ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ರವರ ಅಧಿಕೃತ ಜ್ಞಾಪನ ಸಂಖ್ಯೆ:ಸಿ4(7) ಪ್ರೌಶಿವರ್ಗ/01/2016-17 ದಿನಾಂಕ:-12-08-2016.

******

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2016-17 ನೇ ಸಾಲಿನ ಪ್ರೌಢ ಶಾಲಾ ಸಹ ಶಿಕ್ಷಕರು/ದೈಹಿಕ ಶಿಕ್ಷಕರ/ವಿಶೇಷ ಶಿಕ್ಷಕರ ಘಟಕದೊಳಗಿನ ವರ್ಗಾವಣೆಗೆ ಸಂಬಂಧಿಸಿದಂತೆ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿಯಲ್ಲಿ ಇರುವವರ ಕೌನ್ಸಿಲಿಂಗ್ ಕುರಿತು ಈ ಕೆಳಕಾಣಿಸಿದಂತೆ ವೇಳಾಪಟ್ಟಿ ನಿಗದಿ ಪಡಿಸಲಾಗಿದೆ. ಪ್ರಯುಕ್ತ ಈ ಕೆಳಕಂಡ ದಿನಾಂಕಗಳ ಪ್ರಕಾರ ಕೌನ್ಸಿಲಿಂಗ್‌ಗೆ ಹಾಜರಾಗುವದು ಹಾಗೂ ಸದರ ವೇಳಾಪಟ್ಟಿಯನ್ನು ಶಿಕ್ಷಕರ ಗಮನಕ್ಕೆ ತರಲು ಸೂಚಿಸಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಕೌನ್ಸಿಲಿಂಗ್ ದಿನಾಂಕ | ಆದ್ಯತಾ ಪಟ್ಟಿಯ ಕ್ರಮ ಸಂಖ್ಯೆ |
|---|---|---|---|
| 1 | ಪ್ರೌಢಶಾಲಾ ಸಹಶಿಕ್ಷಕರು | 20-09-2016 | 01 ರಿಂದ 400 |
| 2 | ಪ್ರೌಢಶಾಲಾ ಸಹಶಿಕ್ಷಕರು | 21-09-2016 | 401ರಿಂದ 1100 |
| 3 | ಪ್ರೌಢಶಾಲಾ ಸಹಶಿಕ್ಷಕರು | 22-09-2016 | 1101ರಿಂದ 1635 |
| 4 | ಪ್ರೌಢಶಾಲಾ ದೈಹಿಕ ಶಿಕ್ಷಕರು | 23-09-2016 | 01 ರಿಂದ 244 |
| 5 | ವಿಶೇಷ ಶಿಕ್ಷಕರು | | 01 ರಿಂದ 127 |

ಪ್ರತಿದಿನ ಬೆಳಿಗ್ಗೆ 9.30 ಘಂಟೆಯಿಂದ ಆಯಾ ದಿನದ ಆದ್ಯತಾ ಕ್ರಮ ಸಂಖ್ಯೆಯವರೆಗೆ ಕೌನ್ಸಿಲಿಂಗ್ ನಡೆಸಲಾಗುವುದು. ಸಂಬಂಧಿಸಿದ ಶಿಕ್ಷಕರು ಮೇಲಿನ ವೇಳಾಪಟ್ಟಿಯಂತೆ **ಧಾರವಾಡ ಆಯುಕ್ತಾಲಯದ ಆವರಣದಲ್ಲಿರುವ ಡಯಟ್ ಪ್ರಾರ್ಥನಾ ಸಭಾ ಮಂದಿರದಲ್ಲಿ** ಸಕಾಲದಲ್ಲಿ ವರ್ಗಾವಣೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳೊಂದಿಗೆ ಹಾಜರಿರಲು ತಿಳಿಸುವುದು ಹಾಗೂ ಕೌನ್ಸಿಲಿಂಗ್ ದಿನಗಳಂದು ಉಪನಿರ್ದೇಶಕರ ಕಛೇರಿಯ ಸಂಬಂಧಿಸಿದ ವಿಷಯ ನಿರ್ವಾಹಕರು ಈಗಾಗಲೇ ತಂತ್ರಾಂಶದಲ್ಲಿ ಅಳವಡಿಸಿರುವ ಖಾಲಿ ಹುದ್ದೆ ಮಾಹಿತಿ ಹಾಗೂ ಅಗತ್ಯ ದಾಖಲೆಗಳೊಂದಿಗೆ ಹಾಜರಿರಲು ಸೂಚಿಸಿದೆ ಹಾಗೂ ಕೋರಿಕೆ ವರ್ಗಾವಣೆಗಳ ಬಗ್ಗೆ ಕೌನ್ಸಿಲಿಂಗ್ ನಡೆಯುವ ಸ್ಥಳ ಮತ್ತು ದಿನಾಂಕಗಳನ್ನು ತಮ್ಮ ಕಛೇರಿಯ ಮಾಹಿತಿ ಫಲಕದಲ್ಲಿ ಪ್ರಕಟಿಸಿ ಸ್ಥಳೀಯ ಪತ್ರಿಕೆಗಳಲ್ಲಿ ಮಾಹಿತಿಗಳನ್ನು ಪ್ರಕಟಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

(ಎಂ.ಡಿ.ಬಳ್ಳಾರಿ),
ಸಹನಿರ್ದೇಶಕರು(ಆಡಳಿತ),
ಹಾಗೂ ವರ್ಗಾವಣಾ ಪ್ರಾಧಿಕಾರಿಗಳು,
ಅಪರ ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

**ಪ್ರತಿ ಮಾಹಿತಿಗಾಗಿ**: ಈ ಕಛೇರಿಯ ಇ ಆಡಳಿತ ಶಾಖೆಗೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.

# ಪ್ರಕಟಣೆ

ಸಾರ್ವಜನಿಕ ಶಿಕ್ಷಣ ಇಲಾಖೆಯ 2016-17 ನೇ ಸಾಲಿನ, ಬೆಳಗಾವಿ ವಿಭಾಗದೊಳಗಿನ ಪ್ರೌಢಶಾಲಾ ಶಿಕ್ಷಕರ ಘಟಕದೊಳಗಿನ ಕೋರಿಕೆ ವರ್ಗಾವಣೆಯ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಪ್ರಕಟಿಸಲಾಗಿದೆ. ಕೋರಿಕೆ ವರ್ಗಾವಣೆಯ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕ ವೃಂದದವರಿಗೆ ದಿನಾಂಕ: 20-09-2016 ರಿಂದ 23-09-2016 ರವರೆಗೆ ಕೌನ್ಸಿಲಿಂಗ್ ಇದ್ದು, ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರ ವೃಂದದವರು ಈ ಕೆಳಕಂಡ ದಾಖಲೆಗಳೊಂದಿಗೆ ಧಾರವಾಡ ಆಯುಕ್ತಾಲಯದ ಆವರಣದಲ್ಲಿರುವ ಡಯಟ್ ಪ್ರಾರ್ಥನಾ ಮಂದಿರದಲ್ಲಿ ಸಕಾಲದಲ್ಲಿ ಹಾಜರಾಗಲು ತಿಳಿಸಿದೆ

- ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕೃತ ಇತ್ತೀಚಿನ ಭಾವಚಿತ್ರ ಲಗತ್ತಿಸಿರುವ ಸೇವಾ ದೃಢೀಕರಣ ಪತ್ರ (ಎಲ್ಲಾ ಪ್ರಕರಣಗಳ ಶಿಕ್ಷಕರುಗಳಿಗೆ ಕಡ್ಡಾಯ)
- ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮೋದಿಸಲ್ಪಟ್ಟ ಅರ್ಜಿಯ ಪ್ರತಿ.
- ನೇಮಕಾತಿ ಆದೇಶದ ಪ್ರತಿ.
- ಖಾಯಂಪೂರ್ವ ಸೇವಾವಧಿ ಘೋಷಣೆಯಾದ ಬಗ್ಗೆ ಆದೇಶದ ಪ್ರತಿ
- ತೀವ್ರತರಹ ಖಾಯಿಲೆ/ಅಂಗವಿಕಲ ಪ್ರಕರಣದವರು ಬೆಳಗಾವಿ ವಿಭಾಗದ ವಿಭಾಗೀಯ ವೈದ್ಯಕೀಯ ಮಂಡಳಿಯಿಂದ ನೀಡಲಾದ ಮೂಲ ಪ್ರಮಾಣ ಪತ್ರ.
- ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರು ಇರುವ ಪ್ರಕರಣದವರು ಪತಿ ಅಥವಾ ಪತ್ನಿಯ ಮೂಲ ಸೇವಾ ದೃಢೀಕರಣ ಪತ್ರದೊಂದಿಗೆ ಹಾಜರಾಗುವುದು.
- ಪತಿ ಅಥವಾ ಪತ್ನಿ ಪಕ್ರರಣದವರು ಪತಿ ಅಥವಾ ಪತ್ನಿಯವರ ಮೂಲ ವಾಸ ಸ್ಥಳ ದೃಢೀಕರಣ ಪತ್ರ/ಸೇವಾ ಪ್ರಮಾಣ ಪತ್ರ.
- ಪತಿ ಮತ್ತು ಪತ್ನಿ ಹಾಗೂ ಪತಿ ಅಥವಾ ಪತ್ನಿ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿರುವವರು ಪತಿ ಪತ್ನಿ ಎನ್ನುವ ಬಗ್ಗೆ ದಾಖಲೆ ತರುವುದು.
- ವಿಧವಾ ಶಿಕ್ಷಕರ ಪ್ರಕರಣದವರು ಪತಿಯ ಮೂಲ ಮರಣ ಪ್ರಮಾಣ ಪತ್ರ ಅಥವಾ ಇತರೆ ಯಾವುದಾದರೂ ಒಂದು ದಾಖಲೆಯನ್ನು ಹಾಜರುಪಡಿಸುವುದು.
- ಸೈನಿಕ ಪ್ರಕರಣದವರು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ.
- ಪ್ರಾಥಮಿಕ ಶಾಲಾ ಶಿಕ್ಷಕ ವೃಂದದಿಂದ ಪ್ರೌಢ ಶಾಲಾ ವೃಂದಕ್ಕೆ ಬಡ್ತಿ ಹೊಂದಿದ್ದಲ್ಲಿ ಬಡ್ತಿ ಆದೇಶದ ಪ್ರತಿ.
- ಒಟ್ಟಾರೆ ಆದ್ಯತೆಗೆ ಸಂಬಂಧಿಸಿದ ಪೂರಕ ದಾಖಲೆ ಕಡ್ಡಾಯವಾಗಿ ತರುವುದು.

(ಎಂ.ಡಿ.ಬಳ್ಳಾರಿ),
ಸಹನಿರ್ದೇಶಕರು(ಆಡಳಿತ),
ಹಾಗೂ ವರ್ಗಾವಣಾ ಪ್ರಾಧಿಕಾರಿಗಳು,
ಅಪರ ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

ಪ್ರತಿ ಮಾಹಿತಿಗಾಗಿ:

1. ಈ ಕಛೇರಿಯ ಇ ಆಡಳಿತ ಶಾಖೆಗೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
2. ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.